

ದೃಷ್ಟಿಕೋನದಿಂದ ನೋಡುವುದು ಈಚೆಗಿನ ಕ್ರಮ. ಪ್ರಾಯಃ ಹಿಂದೆ ಇದ್ದಿರಲಾರದು ಎಂದು ನನ್ನ ಅನಿಸಿಕೆ. ಯಾಕೆಂದರೆ ನನ್ನ ಪುಟ್ಟತ್ತೆ ಬೆಳಗ್ಗೆ ಮೊಸರು ಕಡೆಯುವಾಗ ಹೇಳುತ್ತಿದ್ದ ಹಾಡುಗಳು ಅವರಿಂದ ದೂರ ಇರುತ್ತಿದ್ದಿಲ್ಲ. ಮೊಸರು ಕಡೆಯುವುದೂ ಹಾಡು ಹೇಳುವುದೂ ಒಂದೇ ಆಗಿತ್ತು ಎಂಬಂತೆ ಅವರಿದ್ದರು. ಹಾಗೆ ನಮ್ಮ ತಾಯಂದಿರು, ನೆಲ ಒರೆಸುವಾಗ, ಬಟ್ಟೆ ತೊಳೆಯುವಾಗ, ಅಡುಗೆ ಮಾಡುವಾಗ ಅವರು ಆಯಾ ಕೆಲಸದ ಒಂದು ಭಾಗವೇ ಆದ ಹಾಗೆ ಇರುತ್ತಿದ್ದರು. ಈಗ ಎಲ್ಲದಕ್ಕೂ ಯಂತ್ರಗಳು ಬಂದಿವೆ. ನಮ್ಮ ಕೆಲಸಗಳನ್ನು ಅವು ಮಾಡುವಾಗ ನಾವು ಅವುಗಳ ಜೊತೆ ಇರುವುದಿಲ್ಲ, 'ಹೊರಗಿರುತ್ತೇವೆ.' ಹಾಗಾಗಿ ಈಗ ನಮ್ಮಲ್ಲಿ 'ಯೋಗ ಕರ್ಮಸು ಕೌಶಲಂ' ಎನ್ನುವುದು ಕಡಿಮೆಯಾಗಿದೆ ಅಥವಾ ಇಲ್ಲ! ನನಗೆ ನನ್ನದು 'ವಿಶೇಷ' ಅಂತ ಅನಿಸುವುದಿಲ್ಲ. 'ನನ್ನದಲ್ಲದ್ದೂ' ಆಗುವುದಿಲ್ಲ!

◆ **ಕಾವ್ಯ, ಕಥೆ, ಕಾದಂಬರಿ, ವೈದ್ಯಕೀಯ ಮತ್ತು ಆತ್ಮಕತೆಯ ಪ್ರಕಾರಗಳಲ್ಲಿ ಗಮನಾರ್ಹ ಕೆಲಸ ಮಾಡಿದ್ದರೂ 'ಕಾವ್ಯವೇ ಹೆಚ್ಚು ಇಷ್ಟ' ಅಂತ ಹೇಳಿಕೊಂಡಿದ್ದೀರಿ. ಮತ್ತೊಂದೆಡೆ 'ಬಾಲ್ಯದಿಂದಲೂ ನಾನು ಅಂತರ್ಮುಖಿಯಲ್ಲ, ತುಸು ಹೆಚ್ಚೇ ಎನ್ನುವಷ್ಟು ವಾಚಾಳಿ' ಎಂತಲೂ ಹೇಳಿಕೊಂಡಿದ್ದೀರಿ. ವಾಚ್ಯತೆ ಕಾವ್ಯಕ್ಕೆ ವ್ಯತಿರಿಕ್ತವಾದ ಭಾವವಲ್ಲವೇ? ಈ ವೈರುಧ್ಯದ ಬಗ್ಗೆ ಹೇಳಿ.**

ಕಾವ್ಯದ ಬಂಧದಲ್ಲಿ ಬಿಗಿ ಇರಬೇಕು. ಅದು ವಾಚಾಳಿಯಾಗಿರಬಾರದು ಎನ್ನುವುದು ನಾವು ಒಪ್ಪಿಕೊಂಡ ಸತ್ಯ. ಆದರೆ, ನವೋದಯದವರು ಛಂದಸ್ಸಿಗೆ ಹೆಚ್ಚು ಒತ್ತು ಕೊಟ್ಟು ಬಿಗಿ ಬಂಧನವನ್ನು ಒಪ್ಪಿ ಅದಕ್ಕಾಗಿ ಮತ್ತು ಪ್ರಾಸಗಳಿಗಾಗಿ, ಕಾವ್ಯದ ಬಂಧವನ್ನು ಸ್ವಲ್ಪ 'ಸಡಿಲು' ಮಾಡಿದ್ದು ನಿಮಗೂ ಗೊತ್ತು. ಈ ಪ್ರಕ್ರಿಯೆ ಪಂಪ ರನ್ನರ ಕಾಲದಲ್ಲಿ ಇಲ್ಲದೆ ಇದ್ದರೂ, ವಚನಕಾರರು ಕಾವ್ಯವನ್ನು ಮಾತಿಗೆ ಸಮಾನಾಂತರವಾಗಿ ಹೇಳಬಹುದು ಎಂಬುದನ್ನು ನಮಗೆ ತೋರಿಸಿಕೊಟ್ಟರು. 'ವಚನ' ಎನ್ನುವುದರ ಅರ್ಥವೇ ಮಾತು! ಆದರೆ ಅಲ್ಲಿ ಮಾತು 'ಕೇವಲ' ಮಾತಾಗಿ ಉಳಿಯುವುದಿಲ್ಲ. ಕಾವ್ಯದ ಮುಖ್ಯಗುಣಗಳಾದ ಲಯ, ಅಲಂಕಾರ ಮತ್ತು ತುಸು